# ‘ಶ್ರೀರಾಮಕೃಷ್ಣ ವಚನವೇದ’ ಭಾವಧಾರೆ - 26

**ಸ್ವಾಮಿ ನಿತ್ಯಸ್ಥಾನಂದ**

### ತಾಳ್ಮೆ ಮುಖ್ಯ

ಶ್ರೀರಾಮಕೃಷ್ಣರು ಇಲ್ಲಿ ಒಂದು ಮುಖ್ಯ ವಿಷಯವನ್ನು ಹೇಳುತ್ತಾರೆ: ‘‘ನೀನು ಸುಮ್ಮನೆ ಅಲ್ಲಿಗಿಲ್ಲಿಗೆ ಅಲೆಯಬೇಡ...’’ ಯಾವುದೋ ಒಂದು ನಿರ್ದಿಷ್ಟ ಮಾರ್ಗವನ್ನು ಗಟ್ಟಿಯಾಗಿ ಹಿಡಿದುಕೊಂಡು ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿಯುವ ತಾಳ್ಮೆ ಜನರಿಗೆ ಇರುವುದಿಲ್ಲ — ವಿಶೇಷವಾಗಿ ಇಂದಿನ ದಿಢೀರ್ ಯುಗದಲ್ಲಿ ಎಲ್ಲ ತತ್‌ಕ್ಷಣ ಆಗಿಬಿಡಬೇಕು. ಹೀಗಾಗಿ ಬೇರೆ ಬೇರೆ ಮಾರ್ಗಗಳನ್ನು ಅನುಸರಿಸಿ, ಕೊನೆಗೆ ಏನೂ ದೊರೆಯದೆ ಹತಾಶರಾಗುತ್ತಾರೆ. ಒಬ್ಬ ವ್ಯಕ್ತಿಯು ಗುರುವಿನ ಹತ್ತಿರ ಆತುರದಿಂದ ಓಡಿಬಂದು ‘‘ನನಗೆ ಸಾಕ್ಷಾತ್ಕಾರವನ್ನು ಕರುಣಿಸಿ’’ ಎಂದು ಕೇಳಿಕೊಂಡ. ‘‘ಮನೆಗೆ ಹೋಗಿ ಜೋರಾಗಿ ಮಳೆ ಬರುತ್ತಿರುವಾಗ ಹೊರಗೆ ಬಂದು ಮಳೆಯಲ್ಲಿ ನಿಂತುಕೋ’’ ಎಂದು ಗುರು ಹೇಳಿದನು. ಆ ವ್ಯಕ್ತಿಯು ಆತ ಹೇಳಿದಂತೆಯೇ ಮಾಡಿದ. ಮತ್ತೆ ಗುರುವಿನ ಬಳಿಗೆ ಬಂದಾಗ, ‘‘ಮಳೆಯಲ್ಲಿ ನಿಂತೆಯಾ?’’ ಎಂದು ಗುರು ಕೇಳಿದ. ‘‘ಹೌದು’’ ಎಂದನೀತ. ಗುರು ಕೇಳಿದ, ‘‘ಆ ರೀತಿ ಮಳೆಯಲ್ಲಿ ನಿಂತಾಗ ನಿನಗೆ ಹೇಗನ್ನಿಸಿತು?’’ ‘‘ನಾನೊಬ್ಬ ಶುದ್ಧ ಮೂರ್ಖ ಎಂದೆನಿಸಿತು’’ ಎಂದು ಆ ವ್ಯಕ್ತಿ ಉತ್ತರಿಸಿದ. ‘‘ಸದ್ಯಕ್ಕೆ ನಿನಗೆ ಈ ಸಾಕ್ಷಾತ್ಕಾರವೇ ಸಾಕು’’ — ಗುರುವಿನ ಉತ್ತರ.

ಇನ್ನೊಂದು ಕಥೆಯನ್ನು ಇಲ್ಲಿ ಪ್ರಸ್ತಾಪಿಸಬಹುದು. ಒಬ್ಬ ಸಾಧಕನು ಗುರುವನ್ನು ಸಂಧಿಸಿ ಪ್ರಶ್ನಿಸಿದನು: ‘‘ನಾನು ಇಂದಿನಿಂದ ಸಾಧನೆಯನ್ನು ಪ್ರಾರಂಭಿಸಿದರೆ ಸಿದ್ಧಿಯನ್ನು ಪಡೆಯಲು ಎಷ್ಟು ಸಮಯ ಬೇಕಾಗಬಹುದು?’’

**ಗುರು:** ‘‘ಬಹುಶಃ ಹತ್ತು ವರ್ಷ.’’

**ಸಾಧಕ:** ‘‘ಹತ್ತು ವರ್ಷ ಬೇಕೇ!’’ ಎಂದು ಆತಂಕದಿಂದ ಕೇಳಿದ.

**ಗುರು:** ‘‘ಇಪ್ಪತ್ತು ವರ್ಷವಾದರೂ ಆಗಬಹುದು’’

**ಸಾಧಕ:** (ತುಂಬ ಆತಂಕದಿಂದ) ‘‘ಅಯ್ಯೋ, ಅಯ್ಯೊ! ಇಪ್ಪತ್ತು ವರ್ಷ!!’’

**ಗುರು:** ‘‘ನಿನ್ನ ವಿಷಯದಲ್ಲಿ ಹೇಳಬೇಕಾದರೆ ಮೂವತ್ತು ವರ್ಷ ಬೇಕಾಗಬಹುದು.’’

**ಸಾಧಕ:** (ಹತಾಶೆಯ ಧ್ವನಿಯಲ್ಲಿ) ‘‘ಇದೇನು ಹೀಗೆ ಹೇಳುತ್ತಿರುವಿರಿ?’’



**ಗುರು:** ‘‘ನೋಡಪ್ಪ, ತಾಳ್ಮೆಯಿಲ್ಲದಿದ್ದರೆ ಏನನ್ನೂ ಸಾಧಿಸಲಾಗುವುದಿಲ್ಲ.’’

### ಪರಿಶ್ರಮ ಅಗತ್ಯ

ಶ್ರೀರಾಮಕೃಷ್ಣರು: ‘‘ಇದನ್ನು (ಭಗವದ್ವಿಚಾರವನ್ನು) ಅರ್ಥಮಾಡಿ ಕೊಳ್ಳಬೇಕಾದರೆ ಸಾಧನೆ ಮಾಡಬೇಕು. ಕಿರುಮನೆಯೊಳಗಿಟ್ಟಿರುವ ರತ್ನ ನೋಡಬೇಕಾಗಿದ್ದರೆ, ಅದನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿದ್ದರೆ, ಶ್ರಮವಹಿಸಿ ಬೀಗದಕೈ ವಿಚಾರಿಸಿ ತಂದು ಬಾಗಿಲು ತೆರೆಯಬೇಕಾಗುತ್ತದೆ. ಬಳಿಕ ರತ್ನವನ್ನು ಹೊರಕ್ಕೆ ತೆಗೆದುಕೊಂಡು ಬರಬೇಕಾಗುತ್ತದೆ. ಹಾಗೆ ಮಾಡದೆ, ಬೀಗಹಾಕಿದ ಬಾಗಿಲಿನ ಮುಂದೆ ಸುಮ್ಮನೆ ನಿಂತುಕೊಂಡು, ‘ಈಗ ಬೀಗ ತೆಗೆದಿದ್ದೇನೆ. ಸಂದೂಕದ ಬೀಗವನ್ನು ಮುರಿದಿದ್ದಾಯಿತು, ಈಗ ರತ್ನ ಹೊರಕ್ಕೆ ತೆಗೆದಿದ್ದೇನೆ’ ಎಂಬುದಾಗಿ ಭಾವಿಸಿದರೆ ಅದರಿಂದ ಏನು ತಾನೆ ದೊರೆತೀತು? ಸಾಧನೆ ಮಾಡಬೇಕು.’’

ಇದೇ ಭಾವನೆಯನ್ನು ವ್ಯಕ್ತಪಡಿಸುವ ಒಂದು ಶ್ಲೋಕ ‘ವಿವೇಕಚೂಡಾಮಣಿ’ಯಲ್ಲಿ ಬರುತ್ತದೆ:

ಆಪ್ತೋಕ್ತಿಂ ಖನನಂ ತಥೋಪರಿಶಿಲಾದ್ಯುತ್ಕರ್ಷಣಂ ಸ್ವೀಕೃತಿಂ ।
ನಿಕ್ಷೇಪಃ ಸಮಪೇಕ್ಷತೇ ನ ಹಿ ಬಹಿಃ ಶಬ್ದೈಸ್ತು ನಿರ್ಗಚ್ಛತಿ ॥
ತದ್ವದ್ಬ್ರಹ್ಮವಿದೋಪದೇಶ-ಮನನ-ಧ್ಯಾನಾದಿಭಿರ್ಲಭ್ಯತೇ ।
ಮಾಯಾಕಾರ್ಯ-ತಿರೋಹಿತಂ ಸ್ವಮಮಲಂ ತತ್ತ್ವಂ ನ
ದುರ್ಯುಕ್ತಿಭಿಃ ॥ *(ವಿ.ಚೂ., ೬೫)*

''ಭೂಮಿಯ ಕೆಳಗೆ ಹುದುಗಿರುವ ನಿಧಿಯನ್ನು ಪಡೆಯಬೇಕಾದರೆ, ಮೊದಲು ಅದರ ಬಗ್ಗೆ ತಿಳಿದುಕೊಳ್ಳಬೇಕು. ಅನಂತರ ಮಣ್ಣನ್ನು ಅಗೆದು ತೆಗೆಯಬೇಕು, ಅದನ್ನು ಮುಚ್ಚಿರುವ ಚಪ್ಪಡಿಕಲ್ಲು ಮುಂತಾದವುಗಳನ್ನು ತಳ್ಳಿಹಾಕಬೇಕು, ಅನಂತರ ಅದನ್ನು ತೆಗೆಯಬೇಕು. ಇದಾವುದನ್ನೂ ಮಾಡದೆ 'ನಿಧಿಯೇ ಹೊರಗೆ ಬಾ' ಎಂದು ಕರೆಯುತ್ತಿದ್ದರೆ ಅದು ಬರುವುದಿಲ್ಲ. ಹಾಗೆಯೇ ಮಾಯಾಕಾರ್ಯದಿಂದ ಮುಚ್ಚಲ್ಪಟ್ಟಿರುವ ತನ್ನ ಪರಿಶುದ್ಧ ಸ್ವರೂಪವನ್ನು ಬ್ರಹ್ಮವಿದರ ಉಪದೇಶದಿಂದಲೂ. ಮನನ-ಧ್ಯಾನಾದಿಗಳಿಂದಲೂ ಪಡೆಯಬಹುದು. ಕೇವಲ ತರ್ಕದಿಂದ ಆಗದು.''

**ನೈಷಾ ತರ್ಕೇಣ ಮತಿರಾಪನೇಯಾ** – '' ಈ ಜ್ಞಾನವನ್ನು ತರ್ಕದಿಂದ ಪಡೆಯಲಾಗುವುದಿಲ್ಲ'' ಎಂದು ಉಪನಿಷತ್ತು ಕೂಡ ಹೇಳುತ್ತದೆ. ತರ್ಕ ಮಾಡುತ್ತಾ ಹೋದಂತೆ ಮನಸ್ಸು ತರ್ಕದ ಸುಳಿಯಲ್ಲಿ ಸಿಕ್ಕಿಹಾಕಿಕೊಂಡುಬಿಡುತ್ತದೆ, ತರ್ಕವು ಒಂದು ಶಬ್ದಚಮತ್ಕಾರ(wordplay)ವಾಗಿ ಬಿಡುತ್ತದೆ. ಆಗ ವ್ಯಕ್ತಿಯು ಸತ್ಯದಿಂದ ದೂರವಾಗಿಬಿಡುತ್ತಾನೆ. ತರ್ಕದ ಉದ್ದೇಶ ವ್ಯವಸ್ಥಿತ ಆಲೋಚನೆಯ ಮೂಲಕ ಸತ್ಯವನ್ನು ಕಂಡುಹಿಡಿಯುವುದು. ಆದರೆ ಈ ಶಬ್ದಜಾಲದಲ್ಲಿ ಸತ್ಯವು ಕಣ್ಮರೆಯಾಗಿಬಿಡುತ್ತದೆ.

ಆದ್ದರಿಂದಲೇ ಪಂಚದಶಿಕಾರರು ಹೇಳುತ್ತಾರೆ: ''ಬುದ್ಧಿಯ ಮೂಲಕ ಸತ್ಯವನ್ನು ಸರಿಯಾಗಿ ಗ್ರಹಿಸುವುದಕ್ಕಾಗಿ ತರ್ಕವನ್ನು ಬಳಸುವುದಾದರೆ ಅದಿರಲಿ. ಆದರೆ ತನ್ನ ಅನುಭವಕ್ಕೆ ಅನುಸಾರವಾಗಿ ತರ್ಕ ಮಾಡಬೇಕೇ ಹೊರತು, ಕೇವಲ ತರ್ಕಕ್ಕಾಗಿ ತರ್ಕ ಮಾಡಬಾರದು.''

ಈ ಸಂದರ್ಭದಲ್ಲಿ ಒಬ್ಬ ಚೈನೀ ಸಂತ ಚುಆಂಗ್ ಟ್ಸುನ ಹೇಳಿಕೆಯನ್ನು ಪ್ರಸ್ತಾಪಿಸಬಹುದು: ''ಚೆನ್ನಾಗಿ ಬೊಗಳುವುದರಿಂದ ಒಂದು ನಾಯಿ ಒಳ್ಳೆಯದಾಗುವುದಿಲ್ಲ. ಹಾಗೆಯೇ ಒಬ್ಬ ವ್ಯಕ್ತಿಯು ಚೆನ್ನಾಗಿ ಮಾತನಾಡುತ್ತಾನೆ ಎಂದ ಮಾತ್ರಕ್ಕೆ ಅವನನ್ನು ಜ್ಞಾನಿ ಎಂದು ಪರಿಗಣಿಸಲಾಗುವುದಿಲ್ಲ.'' ( 'A dog is not reckoned good because he barks well, and a man is not reckoned wise because he speaks skillfully.' )

ಪರಿಶ್ರಮವನ್ನು ಕುರಿತಾಗಿ ಒಂದು ಸುಭಾಷಿತ ಶ್ಲೋಕವಿದೆ:

ಉದ್ಯಮೇನ ಹಿ ಸಿದ್ಧ್ಯಂತಿ ಕಾರ್ಯಾಣಿ ನ ಮನೋರಥೈಃ ।
ನ ಹಿ ಸುಪ್ತಸ್ಯ ಸಿಂಹಸ್ಯ ಪ್ರವಿಶಂತಿ ಮುಖೇ ಮೃಗಾಃ ॥

''ಕೇವಲ ಮನೋರಥದಿಂದ ಏನನ್ನೂ ಸಾಧಿಸಲಾಗುವುದಿಲ್ಲ, ಪರಿಶ್ರಮ ಪಡಲೇಬೇಕು. ಸಿಂಹವೂ ಕೂಡ ಸುಮ್ಮನೆ ಮಲಗಿಕೊಂಡಿದ್ದರೆ ಪ್ರಾಣಿಗಳು ತಾವಾಗಿ ಅದರ ಬಾಯೊಳಗೆ ಪ್ರವೇಶಿಸುವುದಿಲ್ಲ.''

### ಶ್ರೀರಾಮಕೃಷ್ಣರು ಅನಂತ

**ಮ :** ''ನಾವು ಯಾರ ವಿಷಯವಾಗಿ (ದೇವರ ವಿಷಯವಾಗಿ) ಮಾತನಾಡುತ್ತಿದ್ದೇವೋ, ಆತ ಹೇಗೆ ಅನಂತನೋ ಹಾಗೇ ನೀವೂ ಅನಂತರು. ನಿಜವಾಗಿಯೂ ಯಾರೂ ನಿಮ್ಮ ಆಳವನ್ನು ಕಂಡುಹಿಡಿಯಲಾರರು.''

**ಶ್ರೀರಾಮಕೃಷ್ಣರು:** ''(ನಗುತ್ತ) ಓಹೋ! ನೀನು ಅದನ್ನು ಪತ್ತೆಮಾಡಿಬಿಟ್ಟಿದ್ದೀಯೆ. ನಿನಗೊಂದು ವಿಷಯ ತಿಳಿಸುತ್ತೇನೆ. ವಿವಿಧ ಮಾರ್ಗಗಳನ್ನು ನೋಡಬೇಕು. ಪ್ರತಿಯೊಂದು ಧರ್ಮವನ್ನೂ ಸ್ವಲ್ಪ ಕಾಲ ಆಚರಿಸಿ ನೋಡು. ಪಗಡೆ ಆಟದಲ್ಲಿ ಪಗಡೆ ಕಾಯಿ ಎಲ್ಲ ಮನೆಗಳ ಮೂಲಕ ಹಾದು ಹೋಗದೆ ಇದ್ದರೆ ಅದು ಹೇಗೆ ಹಣ್ಣಾಗಬಲ್ಲದು? ಆದರೆ ಒಮ್ಮೆ ಅದು ಹಣ್ಣಾಯಿತು ಎಂದರೆ ಅದನ್ನು ಯಾರೂ ಹೊಡೆಯಲು ಪ್ರಯತ್ನಿಸರು.''

ಶ್ರೀರಾಮಕೃಷ್ಣರಲ್ಲಿ ಅನಂತ ಭಾವ, ಅವರ ಲೀಲೆಯೂ ಅನಂತ, ಅವರ ಸಾಧನೆಯೂ ಅನಂತ, ಅವರ ಅನುಭವಗಳೂ ಅನಂತ. ಇಂತಹ ಶ್ರೀರಾಮಕೃಷ್ಣರನ್ನು ಅರ್ಥಮಾಡಿಕೊಳ್ಳುವುದು ಸುಲಭಸಾಧ್ಯವಲ್ಲ. ಆದರೂ ಅವರನ್ನು ಒಂದು ತಾತ್ತ್ವಿಕ ಚೌಕಟ್ಟಿನೊಳಗೆ ಇರಿಸಲು ಅನೇಕ ಪ್ರಯತ್ನಗಳು ನಡೆಯುತ್ತಿವೆ. ಈ ರೀತಿ ಮಾಡುವುದೆಂದರೆ ಅವರನ್ನು ಕಿರಿದಾಗಿಸಿದಂತಾಗುತ್ತದೆ. ಅವರ ಅನಂತತೆಯನ್ನು ನಿರಾಕರಿಸಿದಂತಾಗುತ್ತದೆ. ನಾವು ಅವರ ಅದ್ಭುತ ವ್ಯಕ್ತಿತ್ವವನ್ನು ನೋಡಿ ಮೂಕರಾಗಬೇಕು, ಇದೇ ನಾವು ಅವರ ಮಹಿಮೆಗೆ ಸ್ಪಂದಿಸುವ ವಿಧಾನ. ಆ್ಯಂಥೋನಿ ಡಿ. ಮೆಲ್ಲೊ ಅವರು ಒಂದು ಸುಂದರ ಕಥೆ ಹೇಳುತ್ತಾರೆ:

ಇದೊಂದು ಪುರಾತನ ಕಥೆ. ದೇವರು ಜಗತ್ತನ್ನು ಸೃಷ್ಟಿಸುತ್ತಿರುವಾಗ ನಾಲ್ಕು ಜನ ದೇವತೆಗಳು ಅಲ್ಲಿಗೆ ಬಂದರು. ಮೊದಲನೆಯವನು ಕೇಳಿದನು, ''ಹೇಗೆ ನೀನು ಸೃಷ್ಟಿಸುತ್ತಿರುವೆ?'' ಎಂದು. ಎರಡನೆಯವನು, ''ಯಾಕೆ ನೀನು ಈ ಕೆಲಸ ಮಾಡುತ್ತಿರುವೆ?'' ಎಂದು ಕೇಳಿದ. ಮೂರನೆಯವನ ಪ್ರಶ್ನೆ: ''ನಾನು ಸಹಾಯ ಮಾಡಲೆ?'' ''ಇದರಿಂದ ಏನು ಲಾಭ?'' ಈ ಪ್ರಶ್ನೆ ನಾಲ್ಕನೆಯವನದು. ಮೊದಲನೆಯವನು ಜ್ಞಾನಿ, ಎರಡನೆಯವನು ತತ್ತ್ವಜ್ಞಾನಿ, ಮೂರನೆಯವನು ಪರೋಪಕಾರಿ ಮತ್ತು ನಾಲ್ಕನೆಯವನು ವ್ಯಾಪಾರಿ. ಐದನೆಯ ದೇವತೆಯೊಬ್ಬನು ಸೃಷ್ಟಿಕಾರ್ಯವನ್ನು ಆಶ್ಚರ್ಯಚಕಿತನಾಗಿ, ನೋಡಿ ಆನಂದಿಸಿದನು. ಇವನು ಅನುಭಾವಿ. ಹಾಗೆಯೇ ಶ್ರೀರಾಮಕೃಷ್ಣರನ್ನು ನೋಡಿ ಆನಂದಿಸಬೇಕು, ನಮ್ಮ ಅಲ್ಪಬುದ್ಧಿಯಿಂದ ಅರ್ಥಮಾಡಿಕೊಳ್ಳಲು ಪ್ರಯತ್ನಿಸಬಾರದು.

*(ಮುಂದುವರಿಯುವುದು)*